


### ಚಿನ್ನದಂತಹ ಮಾಹಿತಿ

ಫೆ.7ರ 'ಸುಧಾ' ಸಂಚಿಕೆಯ ಸುಧಾ ಹೆಗಡೆಯವರ ಮುಖಪುಟ ಲೇಖನ 'ಚಿನ್ನ ಚಿನ್ನ ಎನ್ನದಿರಿ' ಚಿನ್ನದ ಹಿಂದೆ ಬಿದ್ದ ವ್ಯಾಮೋಹಿಗಳ ಕಣ್ಣು ತೆರೆಸುವಂತಿದೆ. ಬರಹ ಹೆಚ್ಚಿನ ಮಾಹಿತಿ ನೀಡಿತು.

-ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ/ ಪಿ.ಗೋವಿಂದರಾಜ್, ಶಿವಮೊಗ್ಗ

### ದಾಹ! ವ್ಯಾಮೋಹ!

1958ರಲ್ಲಿ ಹತ್ತು ಗ್ರಾಂ. ಚಿನ್ನದ ಬೆಲೆ 90ರೂ. ಇತ್ತು. ಇದೀಗ ಅದರ ಬೆಲೆ 300 ಪಟ್ಟು ಹೆಚ್ಚಾಗಿದ್ದರೂ, ಅದರ ಮೇಲಿನ ವ್ಯಾಮೋಹ (ಮುಖ್ಯವಾಗಿ ಮಹಿಳೆಯರಿಗೆ!) ಕಡಿಮೆಯಾಗಿಲ್ಲ. ದಸರಾ, ದೀಪಾವಳಿ, ಲಕ್ಷ್ಮಿಯ ತದಿಗೆ ಹಬ್ಬಗಳಂದು ಚಿನ್ನಾಭರಣ ಅಂಗಡಿಗಳಲ್ಲಿನ ಒತ್ತಡ ತರಕಾರಿ ಅಂಗಡಿಗಳಿಗಿಂತ ಹೆಚ್ಚಿರುತ್ತದೆ. ಹೊರ ದೇಶಗಳಿಂದ ಚಿನ್ನವನ್ನು ಆಮದು ಮಾಡಿಕೊಳ್ಳುವ ಬದಲಾಗಿ ಅನೇಕ ದೇವಸ್ಥಾನಗಳಲ್ಲಿ, ಮಠ, ಮಂದಿರಗಳಲ್ಲಿ ರಕ್ಷಿಸಲ್ಪಟ್ಟ ಚಿನ್ನವನ್ನು ಜನರಿಗೆ ಮಾರುವ ವ್ಯವಸ್ಥೆಯಾದರೆ ಒಂದೆರಡು ವರ್ಷಗಳಾದರೂ ನಮ್ಮ ಜನರ ದಾಹವನ್ನು ತಣಿಸಬಹುದು!

-ಡಾ. ಕೆ.ಕೆ. ಜಯಚಂದ್ರ ಗುಪ್ತ, ಹಾಸನ

### ಒಳ್ಳೆಯ ಹೆಂಡತಿ ಸಿಗಲಿ

'ತ್ರಿವಿಕ್ರಮನಿಗೆ ಸೊಸೆ ಬೇಕಂತೆ!' ಈರಪ್ಪ ಹಳಕಟ್ಟಿಯವರ ಬರಹ ಮನೋಜ್ಞವಾಗಿತ್ತು. ಅನಾಥ ಹೆಣಗಳ ಅಂತ್ಯಸಂಸ್ಕಾರದಂತಹ ಪುಣ್ಯ ಕೆಲಸದಲ್ಲಿ ಅಪ್ಪ ತ್ರಿವಿಕ್ರಮ ತೊಡಗಿದ್ದಾರೆ. ಮಗ ಪ್ರವೀಣ ಅದೇ ಕೆಲಸ ಮುಂದುವರಿಸಿದ್ದಾರೆ. ತಂದೆ ಮಕ್ಕಳದು ಸಾರ್ಥಕ ಕೆಲಸ. ಹಾಗಾಗಿ ಪ್ರವೀಣನಿಗೆ ಆದರ್ಶ ಗುಣವುಳ್ಳ ಹೆಂಡತಿ ದೊರೆಯಲಿ.

-ತರಂಗಿಣಿ, ತುಮಕೂರು/ ವಿ.ಆರ್.ಹಾದಿಮನಿ, ಬ್ಯಾಡಗಿ

### ಸಾರಿಗೆ ಮಾದರಿಯಾಗಲಿ

ಆಶಾ ಸಂಜೀವ ಗೌರ ಅವರು ಗುಜರಾತ್ ರಾಜ್ಯದ ಅಹಮ್ಮದಾಬಾದ್ ನಗರದ 'ಬಿಆರ್ ಟಿಎಸ್ ವೇಗ ಸಾರಿಗೆ'ಯ ದಕ್ಷತೆ ಕುರಿತು ಬರೆದಿದ್ದಾರೆ. ಈ ವ್ಯವಸ್ಥೆ ದೇಶದ ಇತರ ಮಹಾನಗರಗಳಿಗೆ ಮಾದರಿಯಾಗಲಿ.

-ಮಹೇಶ ಈರಣ್ಣ, ಲಿಂಗಸುಗೂರು/ ರಾಜಶೇಖರ ಹಾದಿಮನಿ, ಧಾರವಾಡ/ ಕೋಟೇಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು

### ನಗರದವರು ನಾಗರಿಕರೆ?

ವಿಚಾರ ಲಹರಿಯಲ್ಲಿ ವೈನತೇಯ ಅವರು ಎತ್ತಿರುವ 'ನಾವೆಷ್ಟು ನಾಗರಿಕರು?' ಎಂಬ ಪ್ರಶ್ನೆ ನಗರ ವಾಸಿಗಳಾದ ನಾಗರಿಕ(?)ರಿಗೆ ಅನ್ವಯವಾಗುತ್ತದೆ. ಶಿಕ್ಷಣ, ಹಣ, ಅಧಿಕಾರ, ಜನಪ್ರಿಯತೆ ಪಡೆದಂತೆ ಜನರು ದ್ವೀಪಗಳಾಗುತ್ತಿರುವುದು ಒಂದು ವಿಪರ್ಯಾಸ.

-ಟಿ.ಎನ್.ಸರಸ್ವತಿ, ತುರುವೇಕೆರೆ

### ಕೋಪ ಪ್ರೀತಿಯ ಮತ್ತೊಂದು ಮುಖ

ವಿಚಾರ ಲಹರಿಯಲ್ಲಿ ಶಿಕಾಕು ಅವರು 'ಶ್ರೀರಾಮನು ಹೇಡಿಯಂತೆ ವಾಲಿಯನ್ನು ಕೊಂದನು' ಎಂದು ಬರೆದಿರುವ ವಾಕ್ಯಕ್ಕೆ ಪ್ರತಿಕ್ರಿಯಿಸಿರುವ ಬಳ್ಳಾರಿ ಮಧ್ವರಾಜ್ ಎಂಬುವರು, 'ಶಿಕಾಕು ಯಾಕೋ ಶ್ರೀರಾಮನನ್ನು ಕಂಡರೆ ಸಿಡಿಮಿಡಿಗೊಳ್ಳುತ್ತಾರೆ' ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಆದರೆ ಶಿಕಾಕು ತಮ್ಮ ಈ ವಾಕ್ಯಕ್ಕೆ ಸಮರ್ಥನೆಯಾಗಿ ಮುಂದಿನ ಪ್ಯಾರದಲ್ಲಿ, 'ಒಳ್ಳೆಯತನವೆಂಬುದು ಅತ್ಯುನ್ನತ ಆದರ್ಶ ಎಂದು ಸಾರಲು ನರಮನುಷ್ಯರ ಕೆಲವು ದೌರ್ಬಲ್ಯಗಳು ಇಲ್ಲಿ ದೃಷ್ಟಾಂತಗಳಾಗಿ ಬಂದಿವೆ ಎಂದು ತಿಳಿಯಬಹುದು' ಎಂದು ಸ್ಪಷ್ಟವಾಗಿ ತಿಳಿಸಿದ್ದಾರೆ.

ರಾಮ ಅಷ್ಟೇ ಅಲ್ಲ, ಶಿವನ ಮೇಲೆಯೂ ಆಗಾಗ ಶಿಕಾಕು ಕೋಪಿಸಿಕೊಳ್ಳುತ್ತಾರೆ! ಪ್ರೀತಿ ಇದ್ದಾಗಲೇ ಅಲ್ಲವೆ ಕೋಪ ಬರುವುದು! ದೇವತೆಗಳನ್ನು ಮನುಷ್ಯರೊಂದಿಗೆ ಸಮೀಕರಿಸುವುದು ಒಳ್ಳೆಯದೇ. ಇದು ಭಾರತೀಯರಿಗಿರುವ ಉದಾರತೆ ಮತ್ತು ಉದಾತ್ತತೆಯ ಪ್ರತೀಕ ಅಲ್ಲವೆ?

-ಬಿ.ಆರ್.ರಾಜಶೇಖರ, ದಾವಣಗೆರೆ

### ಆಕರ್ಷಕವಾದ ಗಹನ ಕಥೆ

ಶೇಖರಗೌಡ ವೀ. ಸರನಾಡಗೌಡರ ಬರೆದ 'ಸಿಂಗಲ್ ಮದರ್' ಎಂಬ ಗಹನ ವಿಷಯದ ಕಥಾವಸ್ತು ಜನಪ್ರಿಯ ಕಥೆಯಂತೆ ಆಕರ್ಷಕವಾಗಿ ಓದಿಸಿಕೊಂಡು ಹೋಯಿತು. ಚಲನಚಿತ್ರ ನಿರ್ದೇಶಕಿಯೊಬ್ಬರು 'ಸುಧಾ'ದಲ್ಲಿ ಬರೆದ ಲೇಖನ ಈ ಕಥೆಗೆ ಸ್ಫೂರ್ತಿಯಾಗಿದೆ.

-ಕೊಹಿಮ, ಬಸರಕೋಡು/ ಬಿ.ಎಸ್.ಮುಳ್ಳೂರ, ಹಲಗತ್ತಿ

### ತಂಪಿ ಅಲ್ಲ, ತಂಬಿ

ಜ.21ರ ಸಂಚಿಕೆಯ ಸೆಲೆಬ್ರಿಟಿ ಅಂಕಣದ 'ಆಸ್ಕರ್ ಹೊಸ್ತಿಲಲ್ಲಿ' ಬರಹದಲ್ಲಿ ಪ್ರಕಟವಾಗಿರುವ ಮಲಯಾಳ ಚಿತ್ರರಂಗದ ಜನಪ್ರಿಯ ಗೀತ ರಚನಕಾರರ ಹೆಸರು 'ಇರಯಿಮ್ಮನ್ ತಂಪಿ' ಎಂಬುದು ತಪ್ಪು. ಅವರ ಹೆಸರು ಶ್ರೀಕುಮಾರನ್ ತಂಬಿ.

-ಡಾ.ವೇಣುಗೋಪಾಲ ಶರ್ಮಾ, ಗುರುವಾಯನಕೆರೆ







ಕೆಬಿಎಲ್
ಗಿಫ್ಟ್
ಕಾರ್ಡ್

ನಿಮ್ಮ ಪ್ರೀತಿ ಪಾತ್ರರಿಗೆ
ಗಿಫ್ಟ್ ನೀಡುವ ಒಂದು
ಉತ್ತಮ ವಿಧಾನ

₹500/-ರಿಂದ ₹25,000/-ದ
ವರೆಗಿನ ಕಾರ್ಡ್‌ಗಳು ಲಭ್ಯ

ನಿಮ್ಮ ಪ್ರೀತಿ ಪಾತ್ರರೇ ತಮ್ಮ
ಗಿಫ್ಟ್‌ನ್ನು ಆಯ್ಕೆ ಮಾಡಿಕೊಳ್ಳುವ
ಸ್ವಾತಂತ್ರ್ಯ

ಆನ್‌ಲೈನ್ ಮೂಲಕ,
ರೆಸ್ಟೊರೆಂಟ್‌ಗಳಲ್ಲಿ ಹಾಗೂ
ಸೂಪರ್ ಬಜಾರ್‌ಗಳಲ್ಲಿ
ಸುಲಭವಾಗಿ
ಉಪಯೋಗಿಸಬಹುದು

ಹೆಚ್ಚಿನ ಮಾಹಿತಿಗಾಗಿ
ಟೋಲ್ ಫ್ರೀ ಸಂಖ್ಯೆ 1800 425 1444ಗೆ ಕರೆ ಮಾಡಿ
ಅಥವಾ ನಿಮ್ಮ ಸಮೀಪದ ಶಾಖೆಯನ್ನು ಸಂಪರ್ಕಿಸಿ

ಷರತ್ತುಗಳು ಅನ್ವಯಿಸುತ್ತವೆ.

ಕರ್ನಾಟಕ ಬ್ಯಾಂಕ್ ಲಿ.
ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.

ನೋಂದಾಯಿತ ಹಾಗೂ ಪ್ರಧಾನ ಕಛೇರಿ: ಮಂಗಳೂರು - 575 002 ಇಮೇಲ್: info@ktkbank.com ವೆಬ್‌ಸೈಟ್: www.karnatakabank.com